**ಓ.ಎಸ್. ನಂಃ 68/2019**

**ಪಿ.ಡಬ್ಲು – 1**

**ಸಾಕ್ಷಿಯನ್ನು ದಿನಾಂಕಃ 03.11.2022 ರಂದು ಪುನಃ ಕರೆಯಿಸಿ,ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 10 ಮತ್ತು 11 ರವರ ಪರ ವಕೀಲರು, ಶ್ರೀ. ವಿ.ಎಸ್.ಬಿ ರವರಿಂದಃ**

1. ಯಮನಪ್ಪ ಕುರಿ ರವರಿಗೆ 3 ಜನ ಗಂಡು ಮಕ್ಕಳು 1 ಹೆಣ್ಣುಮಗಳು. ಹೆಣ್ಣುಮಗಳ ಹೆಸರು ಬಾಳಮ್ಮ. ವೀರಭದ್ರಪ್ಪ ನನ್ನ ಅಣ್ಣ. ನನ್ನ ಅಣ್ಣ ವೀರಭದ್ರಪ್ಪ 2016 ರಲ್ಲಿ ತೀರಿಕೊಂಡಿದ್ದಾರೆ. ಅವರ ಹೆಂಡತಿಯ ಹೆಸರು ಶಿವಗಂಗವ್ವ. ವೀರಭದ್ರಪ್ಪರವರಿಗೆ ಪ್ರತಿವಾದಿ 2 ರಿಂದ 7 ರವರು ಮಕ್ಕಳು. ನನ್ನ ಸಹೋದರ ನಿಂಗಪ್ಪ 11–07–2008 ರಲ್ಲಿ ತೀರಿಕೊಂಡಿದ್ದಾನೆ. ಸದರಿ ನಿಂಗಪ್ಪನಿಗೆ ಶಾಂತವ್ವ ಹೆಂಡತಿ ಎಂದರೆ ಸರಿ. ನಿಂಗಪ್ಪರವರಿಗೆ 10 ನೇ ಪ್ರತಿವಾದಿ ಶಾಂತವ್ವ ಕೋಂ.ನಿಂಗಪ್ಪ ಕುರಿ ಹೆಂಡತಿ ಎಂದರೆ ಸರಿಯಲ್ಲ. ನಿಂಗಪ್ಪ ಮತ್ತು ಶಾಂತವ್ವರವರಿಗೆ ಆನಂದ(11 ನೇ ಪ್ರತಿವಾದಿ) ಎಂಬ ಮಗ ಎಂದರೆ ಸರಿಯಲ್ಲ. ಪ್ರತಿವಾದಿ 10 ಮತ್ತು 11 ರವರು ನನ್ನ ತಮ್ಮನ ಹೆಂಡತಿ ಮತ್ತು ಮಗ ಇದ್ದರೂ ಸಹ ಅವರನ್ನು ಪಕ್ಷಗಾರರನ್ನಾಗಿ ಮಾಡದೇ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ನಿಂಗಪ್ಪನ ಹೆಂಡತಿ ಮತ್ತು ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ನನ್ನ ಸಹೋದರನಿಗೆ ಸಂಬಂಧವಿಲ್ಲದಿದ್ದರೂ ಸಹ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆಂದರೆ ಸರಿಯಲ್ಲ.

2. ಬಾಳಮ್ಮ ಜೀವಂತವಿದ್ದಾಳೆ. ಸದರಿ ಬಾಳಮ್ಮನನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿಯವರಿಗೆ ಭಾಗಾಂಶವನ್ನು ನೀಡಿದ್ದೆನೆಂದು ಸಾಕ್ಷಿ ನುಡಿಯುತ್ತಾರೆ. ಬಂಗಾರ ನೀಡಿ ಮದುವೆ ಮಾಡಿ ಕೊಟ್ಟಿದ್ದೇವೆ. ಬಾಳಮ್ಮನಿಗೆ ಬಂಗಾರ ಮತ್ತು ಹಣ ನೀಡಿರುವ ಬಗ್ಗೆ ದಾಖಲೆ ಇದೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

3. ಮೂಲಪುರುಷ ಯಮನಪ್ಪನಿಗೆ 13 ಎಕರೆ ಜಮೀನು ಇದೆ. ಎ ಶೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ. ಬಿ ಶೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ಇಂದಿಗೂ ಯಾವುದೇ ಪಾಲುವಾಟ್ನಿಯಾಗಿಲ್ಲ ಎಂದರೆ ಸರಿ.

4. 10 ನೇ ಪ್ರತಿವಾದಿ ನನ್ನ ತಮ್ಮ ನಿಂಗಪ್ಪನ ಕಾನೂನುಬದ್ಧ ಹೆಂಡತಿ ಎಂದರೆ ಸರಿಯಲ್ಲ. ನಿಂಗಪ್ಪ ಕೆ.ಎಸ್.ಆರ್.ಟಿ.ಸಿ ಯಲ್ಲಿ ನೌಕರಿ ಮಾಡುತ್ತಿದ್ದ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ರವರು ಗದಗನ ಜಿಲ್ಲಾ ನ್ಯಾಯಾಲಯದಲ್ಲಿ ಓ.ಎಸ್ ನಂ.7/2019 ನ್ನು ನಿಂಗಪ್ಪರವರ ನೌಕರಿಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನರೇಗಲ್ಲನ ಶಾಂತವ್ವ ಮತ್ತು ಶೋಭಾ (ಪ್ರತಿವಾದಿ 8 ಮತ್ತು 9)ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ 10 ಮತ್ತು 11 ನೇ ಪ್ರತಿವಾದಿಗಳು ನಿಂಗಪ್ಪರವರ ವಾರಸುದಾರರು ಎಂದು ತೀರ್ಮಾನವಾಗಿದೆ ಎಂದರೆ ಗೊತ್ತಿಲ್ಲ.

**ಓ.ಎಸ್. ನಂ: 68/2019**

**ಪಿ.ಡಬ್ಲು - 1**

5. ಸದರಿ ನಿಂಗಪ್ಪರವರ ಸೇವಾ ಪುಸ್ತಕದಲ್ಲಿ ಪ್ರತಿವಾದಿ 10 ಮತ್ತು 11ರವರನ್ನು ಹೆಂಡತಿ, ಮಗ ಎಂದು ನಾಮನಿರ್ದೇಶನ ಮಾಡಿದ್ದಾರೆಂದರೆ ಸರಿಯಲ್ಲ. ನಿಂಗಪ್ಪರವರ ಹಿಸ್ಸೆಯನ್ನು ಪಡೆದುಕೊಳ್ಳಲು ಪ್ರತಿವಾದಿ 10 ಮತ್ತು 11ರವರು ಮಾತ್ರ ಹಕ್ಕುಳ್ಳವರು ಎಂದರೆ ಸರಿಯಲ್ಲ . ಪ್ರತಿವಾದಿ 10 ಮತ್ತು 11ರವರಿಗೆ ಆಸ್ತಿ ಕೊಡಬೇಕಾಗುತ್ತದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ 10 ಮತ್ತು 11ರವರು ದಾವಾ ಸ್ವತ್ತುಗಳಲ್ಲಿ ಸಾಮೂಹಿಕವಾಗಿ ಸ್ವಾಧೀನದಲ್ಲಿವೆಂದರೆ ಸರಿಯಲ್ಲ. ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಪ್ರತಿವಾದಿ 10 ಮತ್ತು 11 ಹಾಗೂ ಉಳಿದ ಪ್ರತಿವಾದಿಗಳು ವಹಿವಾಟು ಮಾಡುತ್ತಿದ್ದಾರೆ. ಪ್ರತಿವಾದಿ 10 ಮತ್ತು 11ರವರು ಹೆಂಡತಿ, ಮಗ ಎನ್ನುವ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.